
# ‘ಕಡಲತಡಿಯಿಂದ ಹಿಮಗಿರಿಯ ತನಕ’ : ಒಂದು ಟಿಪ್ಪಣಿ

ಪರಬ್ರಹ್ಮನ ಪರಾಕಾಷ್ಠೆಯಲ್ಲಿ ಲಿಂಗಬೇಧವಿಲ್ಲ. ಕೇವಲ ಈ ಕಾರ್ಯಕಾರಣ ಸಂಬಂಧದ ಜಗತ್ತಿನಲ್ಲಿ ಮಾತ್ರ ನಾವದನ್ನು ನೋಡುವೆವು. ಯಾವಾಗ ಮನಸ್ಸು ಲಿಂಗಾತೀತವಾದ, ವಿಭಿನ್ನವಾದ ಬ್ರಹ್ಮನಲ್ಲಿ ತನ್ಮಯವಾಗುವುದೋ ಆಗ ಗಂಡು, ಹೆಣ್ಣು ಎಂಬ ಭಾವನೆಗಳಿಗೆ ಸ್ಥಳವೇ ಇರದು. ‘ಪುರುಷನಾದವನು ಬ್ರಹ್ಮಜ್ಞಾನ ಪಡೆಯ ಬಲ್ಲವನಾದರೆ ಸ್ತ್ರೀಯು ಏಕೆ ಆ ಜ್ಞಾನ ಪಡೆಯಲಾಗದು? ಅದ್ದರಿಂದಲೇ ಸ್ತ್ರೀಯರಲ್ಲಿ ಓರ್ವಳು ಬ್ರಹ್ಮಜ್ಞಾನಿಯಾದರೂ ಆಕೆಯ ವ್ಯಕ್ತಿತ್ವದ ಪ್ರಭಾವದಿಂದ ಸಾವಿರಾರು ಮಂದಿ ಸ್ತ್ರೀಯರು ಸ್ಫೂರ್ತಿ ಹೊಂದಿ ಸತ್ಯವನ್ನರಿತು ಇಡೀ ದೇಶಕ್ಕೆ ಕಲ್ಯಾಣವಾಗಿ ಸಮಾಜವೂ ಭದ್ರವಾಗುವುದು’ ಎಂಬ ಸ್ವಾಮಿ ವಿವೇಕಾನಂದರ ನುಡಿಗೆ ಸಾಕ್ಷಿ ಯಂತಿದೆ ‘ಕಡಲತಡಿಯಿಂದ ಹಿಮಗಿರಿಯ ತನಕ’ ಎಂಬೀ ಕೃತಿ.

ಸಾಧನೆಯ ಪ್ರತಿಮೂರ್ತಿ ‘ತಪೋವನೀ ಮಾ’ ಎಂದೇ ಸುಪ್ರಸಿದ್ಧರಾದ ಸುಭದ್ರಾ ಮಾತಾರವರ ಆಧ್ಯಾತ್ಮಿಕ ಪಯಣ ನಿಜಕ್ಕೂ ರೋಮಾಂಚನಕಾರಿ, ಮೈ ನವಿರೇಳಿ ಸುವುದು ಎಂದರೆ ಅತಿಶಯೋಕ್ತಿಯಾಗದು. ಈ ಕೃತಿಯ ವಿಶೇಷವೇನೆಂದರೆ ಸಾಹಸ ಮಯ ಬದುಕಿನ ಈ ಕಥಾನಾಯಕಿ ನಮ್ಮಗಳ ನಡುವೆ ಈಗಲೂ ಇದ್ದಾರೆ ಎಂಬುದು. ಆಧ್ಯಾತ್ಮಿಕ ಪಿಪಾಸುಗಳಿಗೆ ಚೇತೋಹಾರಕ, ಸ್ಫೂರ್ತಿದಾಯಕ ಹಾಗೂ ಭರವಸೆಯ ವಿಚಾರ, ಉತ್ತರಾಖಾಂಡದ ಗೋಮುಖ ಹಿಮಶಿಖರ ಹಿಮಬಂಡೆಯ ಮೇಲುಗಡೆ ಇರುವ ತಪೋವನದಲ್ಲಿ ನಿರಂತರ ಒಂಬತ್ತು ವರ್ಷಗಳ ಕಾಲ ಸಾಧನೆ ಮಾಡಿದ ಜಗತ್ತಿನ ಏಕೈಕ ಸಾಧ್ವಿಯ ಜನನ ಕರ್ನಾಟಕದ ತೀರ್ಥಕ್ಷೇತ್ರ ಉಡುಪಿಯಲ್ಲಿ. ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಯವರ ಶಿಷ್ಯೆ, ಕನ್ನಡಿಗರ ಹೆಮ್ಮೆಯ ಪುತ್ರಿ !

ಕೃತಿಯ ಬೆನ್ನುಡಿಯಲ್ಲಿ ಹೀಗೆ ಬರೆದಿದೆ: ‘’ತಪೋವನ ಆರು ತಿಂಗಳು ಕೇವಲ ಹಿಮದಿಂದ ಕೂಡಿರುತ್ತದೆ... ದಿನಗಟ್ಟಳೆ ಸೂರ್ಯನ ದರ್ಶನವಾಗುವುದಿಲ್ಲ. ಅಂತಹ ವಿಷಮ ಪರಿಸ್ಥಿತಿಯಲ್ಲಿ, ಒಳಿತು ಕೆಡಕುಗಳ ಹಾದಿಯಲ್ಲಿ ಸಾಗುತ್ತಾ ಸ್ತ್ರೀಶರೀರದ ಗೌರವವನ್ನು ರಕ್ಷಿಸಿಕೊಳ್ಳುತ್ತಾ, ಎಲ್ಲಾ ನಿಲುಗಡೆಗಳನ್ನು ದಾಟಿ, ಕಠಿಣ ತಪಸ್ಸನ್ನಾಚರಿಸಿ ಒಂಬತ್ತು ವರ್ಷಗಳ ನಂತರ ಮಾ ತಪೋವನದಿಂದ ಕೆಳಗಿಳಿದರು....’’ ಎಂದು.




**ಕೃತಿ:** ಕಡಲತಡಿಯಿಂದ ಹಿಮಗಿರಿಯ ತನಕ
**ಲೇಖಕರು :** ಶೈಲೇಂದ್ರ ಸಕ್ಸೇನ
**ಪ್ರಕಾಶನ :** ದಿವ್ಯ ಪ್ರಕಾಶನ, ಹರಿದ್ವಾರ
**ಪುಟ:** 208 **ಬೆಲೆ :** 200
**ಪ್ರತಿಗಳಿಗೆ :** ಫೋ. 9920075306

ಜಗತ್ತಿನ ಕಣ್ಣಿಗೆ ಕಾಣದೆ, ಕಣ್ಮರೆಯಾಗಬೇಕೆಂದು ಬಯಸುತ್ತಿದ್ದ ಈ ಸಾಧ್ವೀ ಮಣಿಯ ಯಶೋಗಾಥೆಯನ್ನು ಆಧ್ಯಾತ್ಮಿಕ ವಲಯಕ್ಕೆ ಬಳುವಳಿಯಾಗಿತ್ತ ಲೇಖಕರ ಪರಿಶ್ರಮ ನಿಜಕ್ಕೂ ಶ್ಲಾಘನೀಯ. ಅನುವಾದವು ಸರಳವೂ ಸುಂದರವೂ, ಆಕರ್ಷಕವೂ ಆಗಿದೆ. ಒಮ್ಮೆ ಓದಲು ಪ್ರಾರಂಭಿಸಿದರೆ ಪುರ್ಣವಾಗುವವರೆಗೂ ನಿಲ್ಲಿಸಲು ಮನಸ್ಸಾಗದ ಕಥಾ ವಸ್ತು. ಓದುಗರ ಅನುಕೂಲಕ್ಕೆಂದು ಈ ಕೃತಿಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದೆ. ಮೊದಲನೆಯ ಭಾಗದಲ್ಲಿ ಮಾತೆಯವರ, ಲೇಖಕರ ಹಾಗೂ ಪ್ರಕಾಶಕರ ನುಡಿಗಳಿವೆ. ಎರಡನೆಯ ಭಾಗದಲ್ಲಿ ಮಾತೆಯವರ ಆಧ್ಯಾತ್ಮಿಕ ಪಯಣದ ವಿವರಗಳಿವೆ. ಮೂರನೆಯ ಭಾಗದಲ್ಲಿ ಮಾತೆಯವರ ಒಡನಾಡಿ ಸಂತರ ಅಮೂಲ್ಯ ಭಾವನೆಗಳಿವೆ. ನಾಲ್ಕನೆಯ ಭಾಗದಲ್ಲಿ ಹಿತೈಷಿಗಳ ನುಡಿಗಳಿವೆ. ಜನವರಿ ೨೦೧೯ರಲ್ಲಿ ಹಿಂದಿ ಭಾಷೆಯಲ್ಲಿ ಪ್ರಥಮವಾಗಿ ಪ್ರಕಟವಾದ ಕೃತಿ ಶೀಘ್ರವಾಗಿ ಕನ್ನಡಿಗರ ಕೈಸೇರಿರುವುದು ಸಂತಸದ ವಿಷಯ.

ಆದರೆ ಪ್ರೇಮ, ವಾತ್ಸಲ್ಯ ಹಾಗೂ ಮಮತೆಯ ಸ್ವರೂಪರಾದ ಮಾತಾಜಿಯವರ ಜೀವನದಲ್ಲಿನ ಆಧ್ಯಾತ್ಮಿಕ ಅನುಭವಗಳ ವಿವರ ಗಳಿಗಾಗಿ ತಡಕಾಡುವ ಆಧ್ಯಾತ್ಮಿಕ ಪಿಪಾಸುಗಳಿಗೆ ನಿರಾಸೆಯೇ ಕಾದಿದೆ. ಏಕೆಂದರೆ ತಮ್ಮ ಬಗ್ಗೆ ಏನನ್ನೂ ಹೇಳಲಿಚ್ಛಿಸದ ಎಲೆಮರೆಯ ಕಾಯಿಯ ಗುಂಪಿಗೆ ಸೇರಿದವರು ಈ ಸಂತ ತಪಸ್ವಿನಿ. ಆದರೂ ಮಾತೆಯವರ ದುರ್ಲಭ ಚಿತ್ರಗಳು ಕೃತಿಯ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಿವೆ. ಶೀ ವಿಶ್ವೇಶತೀರ್ಥ ಸ್ವಾಮೀಜಿಯವರ ಆಶೀರ್ವಾದಗಳೊಂದಿಗೆ ಕೃತಿ ಪ್ರಕಟಗೊಂಡಿದೆ. ಸುಲಭ ಬೆಲೆಗೆ, ಉತ್ತಮ ಮುದ್ರಣ ದಿಂದ ಕೂಡಿದ ಈ ಕೃತಿ ಸಕಲರಿಗೂ ಸಂಗ್ರಹಯೋಗ್ಯವಾಗಿದೆ.